# ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ
# ಹಾಗೂ ವಿಶೇಷ ನ್ಯಾಯಾಲಯ, ಹಾವೇರಿ
## ಸ್ಪೆಷಲ್ ಎಸ್.ಸಿ./ಎಸ್.ಟಿ.31/2019

Pw-01

Cw-01

| | |
|---|---|
| ಸಾಕ್ಷಿದಾರರ ಹೆಸರುಃ | ಬಸವರಾಜ್ ತಳವಾರ |
| ತಂದೆ:ಗಂಡನ ಹೆಸರುಃ | ಬರಮಪ್ಪ |
| ವಯಸ್ಸುಃ | 29 ವರ್ಷ |
| ಉದ್ಯೋಗಃ | ಚಾಲಕ |
| ವಾಸ ಸ್ಥಳಃ | ಬಾದಾಮಿಗಟ್ಟಿ |

**ದಿನಾಂಕ**:29.06.2022 **ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ ವಿಶೇಷ ಸರ್ಕಾರಿ ಅಭಿಯೋಜಕರಿಂದಃ**

ನಾನು ನಮ್ಮ ಮಾಲೀಕರಾದ ಅಹ್ಮದ್ ರಜಾಕ್ ಖಾನ್ ಪಠಾಣ್ ಶಿಗ್ಗಾಂವ್ ಪೋಸ್ಟ್ ಆಫೀಸಿಗೆ ತಾಃ19.7.2016 ಬೆಳಿಗ್ಗೆ 9.00 ರಿಂದ 10.00 ಗಂಟೆಗೆ ಹೋಗಿದ್ದೆವು. ಸಾಹೇಬ್ ಜಾನ್ ಬುಡಪ್ಪನವರು ಶಿಗ್ಗಾಂವ್ ಪೋಸ್ಟ ಆಫೀಸಿನಲ್ಲಿ ಠೇವಣಿಯಾಗಿ ಹಣ ಇಟ್ಟಿದ್ದರು, ಅವರಿಗೆ ಆರೋಗ್ಯ ಸರಿಯಿರಲಿಲ್ಲ. ಅದನ್ನು ಕೇಳಲು ನಮ್ಮ ಮಾಲೀಕರು ಹೋಗಿದ್ದರು. ನಮ್ಮ ಮಾಲೀಕರು ಪೋಸ್ಟ ಕಚೇರಿ ಅಧಿಕಾರಿಗಳಿಗೆ ಕೇಳುತ್ತಿದ್ದರು. ಅಧಿಕಾರಿಗಳು ಠೇವಣಿ ಹಣ ಈಗಲೇ ಕೊಡಲು ಬರುವುದಿಲ್ಲ, ಹಣ ಕೊಟ್ಟರೆ ನೌಕರಿ ಹೋಗುತ್ತದೆ ಅಂತಾ ಹೇಳಿದರು. ಸಾಹೇಬ್ ಜಾನ್ ಬುಡಪ್ಪನವರು ಅವರ ಆರೋಗ್ಯಕ್ಕಿಂತ ಅಧಿಕಾರಿ ನೌಕರಿ ಮುಖ್ಯನಾ ಅಂತಾ ಕೇಳಿದರು.

ರಮೇಶ್, ಅಶೋಕ್, ರವಿಚಂದ್ರ, ವಿದ್ಯಾವತಿ ಪೋಸ್ಟ ಆಫೀಸ್ ಅಧಿಕಾರಿಗಳು ಸಾಹೇಬ್ ಜಾನ್ ಬುಡಪ್ಪನವರಿಗೆ ಈಗ ಹಣ ಕೊಡಲು ಬರುವುದಿಲ್ಲ, ನೀವು ಸತ್ತರೆ

ನಮಗೇನಾಗಬೇಕಾಗಿದೆ ಅಂತಾ ಅಂದರು. ನಮ್ಮ ಮಾಲೀಕರು ಸಾಹೇಬ್ ಜಾನ್ ನನ್ನು ಶಿಗ್ಗಾಂವ್ ಆಸ್ಪತ್ರೆಗೆ ಕರೆದುಕೊಂಡು ಹೋದರು. ನಾನು ಕಾರಿನಲ್ಲಿದ್ದೆ. ಈ ಮೇಲೆ ಹೇಳಿದ ಅಧಿಕಾರಿಗಳು ನನಗೆ ನೀನು ಅವರ ಪರವಾಗಿ ಬಂದಿನಯೇನೋ ಸೂಳೇ ಮಗನೇ ಅಂತಾ ಬೈದು, ಜಾತಿ ನಿಂದನೆ ಮಾಡಿದರು. ನಾನೇ ಆ ಬಗ್ಗೆ ದೂರು ಕೊಟ್ಟಿರುತ್ತೇನೆ. ಸಾಕ್ಷಿ ಈ ಮೇಲೆ ಹೇಳಿದ ವಿಷಯ ಬಿಟ್ಟು ಮತ್ತೇನೂ ಹೇಳುವುದಿಲ್ಲ ಅಂತಾ ಹೇಳಿದರು.

**ಪಾಟೀ ಸವಾಲುಃ ಆರೋಪಿತರ ಪರವಾಗಿ ಶ್ರೀ ಪಿ.ಆರ್.ಎಂ ವಕೀಲರಿಂದಃ**

ಆರೋಪಿಗಳು ನನಗೆ ಗೊತ್ತಿಲ್ಲ. ನನ್ನ ಜಾತಿ ಯಾವುದೆಂದು ಆರೋಪಿಗಳಿಗೆ ಗೊತ್ತಿಲ್ಲ. ಅವರು ಮತ್ತು ನಮ್ಮ ನಡುವೆ ಯಾವುದೇ ಜಗಳ ಆಗಿಲ್ಲ. ಆರೋಪಿಗಳು ನಮಗೆ ಯಾವುದೇ ಜಾತಿ ನಿಂದನೆ ಮಾಡಿ ಬೈದಿಲ್ಲ ಈ ಬಗ್ಗೆ ಪೊಲೀಸರಿಗೆ ದೂರು ನೀಡಿರುವುದಿಲ್ಲ. ನಾನು ಆಸ್ಪತ್ರೆಗೆ ಹೋಗಿ ಚಿಕಿತ್ಸೆ ತೆಗೆದುಕೊಂಡಿಲ್ಲ. ಈ ಕೇಸಿನ ಬಗ್ಗೆ ನನಗೇನೂ ಗೊತ್ತಿಲ್ಲ. ಪೊಲೀಸರು ಏನು ಬರೆದುಕೊಂಡಿದ್ದಾರೆ ನನಗೇನೂ ಗೊತ್ತಿಲ್ಲ.

**ಮರು ವಿಚಾರಣೆಃಪಿ.ಪಿ. ರವರಿಂದಃ**

ನನ್ನ ಮುಖ್ಯ ವಿಚಾರಣೆಯಲ್ಲಿ ಅಭಿಯೋಜನೆಗೆ ಬೆಂಬಲಿಸಿ ಸಾಕ್ಷಿ ನುಡಿದಿದ್ದು ಆರೋಪಿಗಳೊಂದಿಗೆ ಶಾಮೀಲಾಗಿ ನನ್ನ ಪಾಟೀ ಸವಾಲಿನಲ್ಲಿ ಯಾವುದೇ ವಿಷಯ ಗೊತ್ತಿಲ್ಲ ಅಂತಾ ಸುಳ್ಳು ಹೇಳುತ್ತೇನೆಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇಲೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು ಮತ್ತು ವಿಶೇಷ ನ್ಯಾಯಾಧೀಶರು ಹಾವೇರಿ.